ಸಾಕ್ಷಿಯನ್ನು ಕರೆಯಿಸಿ. ಪ್ರಮಾಣ ವಚನ ಬೋಧಿಸಿತು. ದಿನಾಂಕಃ 20.09.2017

ಪಾಟೀಸವಾಲುಃ ಎಸ್‌ಆರ್‌ಎ ವಕೀಲರಿಂದ

ಚೆನ್ನಮಲ್ಲಪ್ಪನವರ ಹೆಂಡತಿ ಹೆಸರು ಮರಿಮಾದಮ್ಮ ಎಂದರೆ ಸರಿ. ಸದರಿ ದಂಪತಿಗಳಿಗೆ ಪರ್ವತಪ್ಪ ಮತ್ತು ಪಾರ್ವತಮ್ಮ ಇಬ್ಬರೇ ಮಕ್ಕಳು ಎಂದರೆ ಸರಿ. ಪರ್ವತಪ್ಪನವರಿಗೆ ಪುಟ್ಟತಾಯಮ್ಮ , ಪಾರ್ವತಮ್ಮ ಮತ್ತು ಮಹದೇವಸ್ವಾಮಿ ಮೂರು ಜನ ಮಕ್ಕಳು ಎಂದರೆ ಸರಿ. ಪಾರ್ವತಮ್ಮನವರಿಗೆ ನಾನು, ರಾಜೇಶ್ವರಿ ಮತ್ತು ನಾಗವೇಣಿ ಮಕ್ಕಳು ಎಂದರೆ ಸರಿ. ಪರ್ವತಪ್ಪನ ಮಗ ಮಹದೇವಸ್ವಾಮಿ ಅಂದರೆ 1ನೇ ಪ್ರತಿವಾದಿ ನನಗಿಂತ ವಯಸ್ಸಿನಲ್ಲಿ ಚಿಕ್ಕವರು ಎಂದರೆ ಸರಿ. ಚೆನ್ನಮಲ್ಲಪ್ಪ ಯಾವ ವರ್ಷದಲ್ಲಿ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ಮರಿಮಾದಮ್ಮ ಮೃತಪಟ್ಟು 30 ವರ್ಷಕ್ಕಿಂತ ಹೆಚ್ಚು ಕಾಲವಾಗಿದೆ. ನನಗೆ ನಿಖರ ದಿನಾಂಕ ಗೊತ್ತಿಲ್ಲ. ನನ್ನ ಸೋದರ ಮಾವ ಪರ್ವತಪ್ಪ 13 ವರ್ಷಗಳ ಹಿಂದೆ ನನ್ನ ತಾಯಿ ಪಾರ್ವತಮ್ಮ ಅದಾದ 6 ತಿಂಗಳ ನಂತರ ಮೃತಪಟ್ಟಿದ್ದಾರೆ. ನನ್ನ ತಾಯಿಯನ್ನು ಹೆಗ್ಗವಾಡಿಪುರಕ್ಕೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ಅವರು ಸಂತೇಮರಹಳ್ಳಿಯಲ್ಲಿ 30 ಸೆಂಟ್ಸ್ ಜಾಗ ತೆಗೆದುಕೊಂಡು ಮನೆ ಕಟ್ಟಿದರು ಎಂದರೆ ಮನೆ ಕಟ್ಟಿದ್ದಾರೆ. ಆ ಮನೆ ಕಟ್ಟಿ ಸುಮಾರು 60 ವರ್ಷಗಳು ಆಗಿರಬಹುದು. ನನ್ನ ತಂದೆ ತಾಯಿ ಬೇರೆ ಇದ್ದುಕೊಂಡು ಬೇರೆ ಬೇರೆಯಾಗಿ ವ್ಯವಹಾರ ಮಾಡುತ್ತಿದ್ದರು ಎಂದರೆ ಇಲ್ಲಾ ನನ್ನ ತಂದೆ ತಾಯಿ ಸೋದರ ಮಾವ ಪರ್ವತಪ್ಪನ ಜೊತೆಯಲ್ಲೇ ವಾಸಮಾಡುತ್ತಿದ್ದರು. ದಾವಾ ಐಟಂ ನಂಃ 4 ರಲ್ಲಿ ನನ್ನ ಮಾವ ಪರ್ವತಪ್ಪ ವಾಸಮಾಡುತ್ತಿದ್ದರು ಎಂದರೆ ಸರಿ. ನಾವು ಪಾಲುವಿಭಾಗವನ್ನು ತಾತನ ಆಸ್ತಿಯಲ್ಲಿ ಕೇಳುತಿಲ್ಲ ಅಜ್ಜಿಯ ಆಸ್ತಿಯಲ್ಲಿ ಕೇಳುತ್ತಿದ್ದೇವೆ. ಐಟಂ ನಂಃ 1 ರಲ್ಲಿ ಇರುವ ಎರಡೂ ಆಸ್ತಿಗಳಲ್ಲಿ ತಲಾ ಒಂದರಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಇದೆ ಎಂದು ನನಗೆ ಹೇಳಲು ಅಗುವುದಿಲ್ಲ. ಒಟ್ಟಿಗೆ ಅದು 1 ಎಕರೆ 9 ಗುಂಟೆ ಇದೆ. ನಾನು ಹೇಳುವಷ್ಟು ವಿಸ್ತೀರ್ಣ ಅಲ್ಲಿ ಇಲ್ಲವೆಂದರೆ ಸರಿಯಲ್ಲ. ಅದು 1 ಎಕರೆ 4 ಗುಂಟೆ ಮಾತ್ರ ಇದ್ದರೂ ನಾವು 5 ಗುಂಟೆ ಹೆಚ್ಚುವರಿಯಾಗಿ ಕೇಳುತ್ತಿದ್ದೇವೆ ಎಂದರೆ ಸರಿಯಲ್ಲ.

ಐಟಂ ನಂಃ 3 ರಲ್ಲಿ ಇರುವ 1 ಎಕರೆ 35 ಗುಂಟೆ ಮೂಲತಃ ಯಾರಿಗೆ ಸೇರಿತ್ತು ಎಂದರೆ ನನ್ನ ಅಜ್ಜಿಗೆ ಸೇರಿತ್ತು. ನನ್ನ ಅಜ್ಜಿಗೆ ಸದರಿ ಆಸ್ತಿ ಸೇರಿತ್ತು ಎಂಬ ಬಗ್ಗೆ ನೋಂದಣಿಯಾದ ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿ. ನಿಪಿಃ 12 ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಿಪಿಃ 12 ರಲ್ಲಿ ಸರ್ವೆ ನಂಬರ್ 60಼8 ರಲ್ಲಿ 4 ಗುಂಟೆ ಕೂಡ ಇದೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ 4 ಗುಂಟೆಯನ್ನು ಯಾಕೆ ಈ ದಾವೆಗೆ ಸೇರಿಸಿಲ್ಲ ಎಂದರೆ ನನಗೆ ಗೊತ್ತಿರುವ ಆಸ್ತಿಗಳನ್ನು ಮಾತ್ರ ದಾವೆಗೆ ಸೇರಿಸಿದ್ದೇನೆ. ನನ್ನ ಮದುವೆಯಾಗಿ ಸುಮಾರು 41 ವರ್ಷಗಳಾಗಿವೆ. ನನಗೆ ತಂದೆ ತಾಯಿಗಳೇ ಮದುವೆ ಮಾಡಿದರು. ಮನೆ ಕೂಡ ನನ್ನ

ಅಜ್ಜಿಗೇ ಸೇರಿತ್ತು ಎಂಬ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಮುಂದೆ ದಾಖಲೆ ಕೊಡುತ್ತೇನೆ. ನನ್ನ ಅಜ್ಜಿ ಮರಿಮಾದಮ್ಮ ಯಾವುದಾದರೂ ಆದಾಯ ಬರುವಂತಹ ಕೆಲಸ ಮಾಡುತ್ತಿದ್ದರೇ ಎಂದರೆ ಇಲ್ಲಾ ಮನೆ ಕೆಲಸಗಳನ್ನು ಮಾತ್ರ ಮಾಡುತ್ತಿದ್ದರು.

ನಾನು ಕೊಟ್ಟ ಎರಡೂ ಕ್ರಯಪತ್ರಗಳಲ್ಲೂ ಚನ್ನಮಲ್ಲಪ್ಪನವರ ಪತ್ನಿ ಮರಿಮಾದಮ್ಮ ಆಸ್ತಿ ಖರೀದಿ ಮಾಡಿದ್ದಾಗಿ ನಮೂದಾಗಿದೆ ಎಂದರೆ ಸರಿ. ಚೆನ್ನಮಲ್ಲಪ್ಪ ಹಣ ಕೊಟ್ಟು ಆಸ್ತಿಗಳನ್ನು ಖರೀದಿ ಮಾಡಿ ತಮ್ಮ ಪತ್ನಿ ಹೆಸರಿನಲ್ಲಿ ಕ್ರಯಪತ್ರ ಬರೆಯಿಸಿದರು ಎಂದರೆ ಕ್ರಯಪತ್ರಗಳು ನೋಂದಣಿಯಾದ ಕಾಲಕ್ಕೆ ಚೆನ್ನಮಲ್ಲಪ್ಪ ತೀರಿಕೊಂಡಿದ್ದರು. ಅವರು ತೀರಿಕೊಂಡಿದ್ದರೆ ಕ್ರಯಪತ್ರಗಳಲ್ಲಿ ಮೃತ ಚೆನ್ನಮಲ್ಲಪ್ಪನವರ ಪತ್ನಿ ಮರಿಮಾದಮ್ಮ ಎಂದು ನಮೂದಾಗುತ್ತಿತ್ತು ನನಗೆ ಸಂಗತಿ ಗೊತ್ತಿಲ್ಲವಾದ್ದರಿಂದ ಹಾಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಬುದುಕಿದ್ದಾಗ ಆಕೆ ತನ್ನ ಅಣ್ಣನನ್ನಾಗಲೀ ಇಲ್ಲವೇ ತನ್ನ ತಾಯಿಯನ್ನಾಗಲೀ ಭಾಗಾಂಶ ಕೊಡುವಂತೆ ಕೇಳಿದ್ದರೇ ಎಂದರೆ ಇಲ್ಲಾ ಅವರೆಲ್ಲಾ ಒಟ್ಟಿಗೇ ಇದ್ದರು. ನಾನು ನನ್ನ ಸೋದರ ಮಾವನ ಮಗನಾದ 1ನೇ ಪ್ರತಿವಾದಿಯನ್ನು ಯಾವಾಗ, ಯಾವಸ್ಥಳದಲ್ಲಿ ಯಾವ ದಿನಾಂಕದಂದು ಭಾಗಾಂಶ ಕೊಡುವಂತೆ ಕೇಳಿದ್ದೆ ಎಂದರೆ 2014 ರಲ್ಲಿ ಕೇಳಿದ್ದೆ ದಿನಾಂಕ ಗೊತ್ತಿಲ್ಲ. ಅವರು ಸಂತೇಮರಹಳ್ಳಿಯಲ್ಲಿ ನಮ್ಮ ಮನೆಗೆ ಬಂದಾಗ ಕೇಳಿದ್ದೆ. ಎಲ್ಲರೂ ಒಂದೇ ಸ್ಥಳದಲ್ಲಿ ವಾಸಮಾಡಿ ಒಟ್ಟಿಗೆ ಮತಚಾಲನೆ ಮಾಡಿದ ಮತ್ತು ಒಟ್ಟಿಗೆ ಪಡಿತರ ಪಡೆದ ಬಗ್ಗೆ ದಾಖಲೆಗಳು ಇರುತ್ತವೆಯೇ ಎಂದರೆ ಇರುತ್ತವೆ. ನನ್ನನ್ನು ಸಂತೇಮರಹಳ್ಳಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ನನ್ನ ಗಂಡ ವ್ಯವಸಾಯ ಮಾಡುತ್ತಿದ್ದು ಅವರಿಗೆ 6-7 ಎಕರೆ ಇರುತ್ತದೆ. ನನಗೆ ಮೂರು ಜನ ಗಂಡು ಮಕ್ಕಳು. ನಾವು ಎಲ್ಲರೂ ಸಂತೇಮರಹಳ್ಳಿಯಲ್ಲೇ ವಾಸಮಾಡುತ್ತೇವೆ. ನನ್ನ ಅಕ್ಕಂದಿರು ರಾಜೇಶ್ವರಿ ಮತ್ತು ನಾಗವೇಣಿಯನ್ನು ಬೇರೆ ಬೇರೆ ಊರುಗಳಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಅವರಿಬ್ಬರೂ ನನಗಿಂತ 7 ಮತ್ತು 5 ವರ್ಷ ದೊಡ್ಡವರು. ಅವರುಗಳು ಮದುವೆಯಾದ ನಂತರದಿಂದ ಇಲ್ಲಿಯವರೆಗೂ ತಮ್ಮ ತಮ್ಮ ಗಂಡನ ಮನೆಗಳಲ್ಲೇ ವಾಸಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿ ಮತ್ತು ಸೋದರ ಮಾವನ ನಡುವೆ ಸಂಬಂಧ ಯಾವಾಗಲೂ ಚೆನ್ನಾಗಿಯೇ ಇತ್ತು. ನಾನು ಸೋದರ ಮಾವನ ಇಬ್ಬರು ಹೆಣ್ಣುಮಕ್ಕಳ ಜೊತೆ ಕೂಡ ಒಳ್ಳೆಯ ಸಂಬಂಧವನ್ನೇ ಹೊಂದಿದ್ದೇನೆ. ನಮ್ಮ ತಾಯಿ 30 ಸೆಂಟ್ಸ್ ಖರೀದಿ ಮಾಡಿ ಸಂತೇಮರಹಳ್ಳಿಯಲ್ಲಿ ಮನೆ ಕಟ್ಟಿಸಿದಾಗ ನನ್ನ ಸೋದರ ಮಾವ ಪರ್ವತಪ್ಪ ಜೀವಂತವಾಗಿದ್ದರು. ನನ್ನ ಮಾವನೇ ಓಡಾಡಿ ಮನೆ ಕಟ್ಟಿಸಿದರು ಎಂದರೆ ನನ್ನ ತಂದೆ ಕಟ್ಟಿಸಿದರು. ನನ್ನ ಸೋದರ ಮಾವ 30 ಸೆಂಟ್ಸ್ ಖರೀದಿ ಮಾಡಿ ನನ್ನ ತಾಯಿಗೆ ಮನೆ ಕಟ್ಟಿಸಿಕೊಟ್ಟಿದ್ದನ್ನು ಒಪ್ಪಿಕೊಂಡರೆ ನನಗೆ ತೊಂದರೆಯಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಹೇಳಿರುವ ಐಟಂ ನಂಃ 4 ರ ಮನೆ ಜೊತೆಗೆ ಯಾವುದಾದರೂ ಖಾಲಿ ಜಾಗ ಇದೆಯೇ ಎಂದರೆ ಯಾವುದೂ ಇಲ್ಲಾ. ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸಮಾಡಿಲ್ಲ ಮತ್ತು ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ

ಮದುವೆ ಮಾಡಿಕೊಡುವಾಗಲೇ ನನ್ನ ಸೋದರ ಮಾವ ಆಕೆಗೆ ಕೊಡಬೇಕಾಗಿದ್ದನ್ನೆಲ್ಲಾ ಕೊಟ್ಟಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಭಾಗಾಂಶ ಬೇಕಿದ್ದರೆ ಬದುಕಿದ್ದಾಗಲೇ ಕೇಳಿರುತ್ತಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ತಂದಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ 2 ಮತ್ತು 3ನೇ ಪ್ರತಿವಾದಿಗಳ ಪರ ಎಂಆರ್ ವಕೀಲರಿಂದ

ದಾವಾ ಸ್ವತ್ತುಗಳಲ್ಲಿ 2 ಮತ್ತು 3ನೇ ಪ್ರತಿವಾದಿಗಳಿಗೂ ಭಾಗಾಂಶದ ಹಕ್ಕು ಇದೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸಾ ಸ ಇ ಎ ಒ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಯಳಂದೂರು.